ಆ) ಹಾಗಿದ್ದಲ್ಲಿ ಮುಂದಿನ ಸಾಲಿನಲ್ಲಿ ಕಟ್ಟಡ ಕಟ್ಟುವುದಕ್ಕೆ ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು).—

ಅ) ಎರಡು ಕಾಲೇಜುಗಳಿಗೂ ಸ್ವಂತ ಕಟ್ಟಡಗಳಿದ್ದು ಅಧಿಕಾ ಕೊಠಡಿಗಳ ಅವಶ್ಯಕತೆ ಇದೆ.

ಆ) ಸಧ್ಯಕ್ಕೆ ಸಾಧ್ಯವಾಗಲಾರದು.

ರಾಣೆಬೆನ್ನೂರು ತಾಲ್ಲೂಕಿನ ಏತ ನೀರಾವರಿ ಯೋಜನೆ ಬಗ್ಗೆ

೧೩೫ (೧೪೭) ಶ್ರೀ ಕೆ.ಬಿ. ಕೋಳಿವಾಡ (ರಾಣೆಬೆನ್ನೂರು).—ಮಾನ್ಯ ಲೋಕೋಪಯೋಗಿ ಅಚ್ಚುಕಟ್ಟು ಪ್ರದೇಶ ಅಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ೧೯೮೬–೮೭ನೇ ಸಾಲಿನ ಆಯವ್ಯಯ ಪಟ್ಟಿಯಲ್ಲಿ ರಾಣೆಬೆನ್ನೂರು ತಾಲ್ಲೂಕಿನಲ್ಲಿ ಯಾವ ಯಾವ ಏತ ನೀರಾವರಿ ಯೋಜನೆಗಳನ್ನು ಸೇರಿಸಲಾಗಿದೆಯು ?

ಆ) ಸದರಿ ನೀರಾವರಿ ಯೋಜನೆಗಳಿಗೆ ಆಡಳಿತಾತ್ಮಕ ಮಂಜೂರಾತಿ ದೊರೆತಿದೆಯೇ ?

ಇ) ಇಲ್ಲದಿದ್ದಲ್ಲಿ, ಇದಕ್ಕೆ ಕಾರಣಗಳೇನು, ಹಾಗೂ ಯಾವಾಗ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಲಾಗುವುದು ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ೧) ಮದ್ಲೇರಿ ಏತ ನೀರಾವರಿ ಯೋಜನೆ ೨) ಉಕ್ಕಡಗಾತ್ರಿ ಏತ ನೀರಾವರಿ ಯೋಜನೆ
೩) ಮಾಕನೂರು ಏತ ನೀರಾವರಿ ಯೋಜನೆ ೪) ಗುಡಿಯೊನ್ನತ್ತಿ ಏತ ನೀರಾವರಿ ಯೋಜನೆ
೫) ಹೊಳೆ ಆನ್ವೇರಿ ಏತ ನೀರಾವರಿ ಯೋಜನೆಯ ಪೊದಲ ಹಂತ.

ಆ) ಇನ್ನೂ ಇಲ್ಲ.

ಇ) ಈ ಕೆಲಸಗಳ ಆನ್ವೇಷಣಾ ಕೆಲಸ ನಡೆಯುತ್ತಿದ್ದು, ಅಂದಾಜು ಪಟ್ಟಿ ತಯಾರಾದ ನಂತರ, ಹಣಕಾಸಿನ ಲಭ್ಯತೆಯನ್ನವಲಂಬಿಸಿ ಮಂಜೂರಾತಿ ನೀಡಲಾಗುವುದು.

ಸನ್ಯಾಸಿಕೊಪ್ಪ ಏತ ನೀರಾವರಿ ಯೋಜನೆ ಬಗ್ಗೆ

೧೩೪ (೩೧೧) ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಶಿಕಾರಿಪುರ ತಾಲ್ಲೂಕು 'ಸನ್ಯಾಸಿ ಕೊಪ್ಪ' ಏತ ನೀರಾವರಿ ಯೋಜನೆಗೆ ಸರ್ಕಾರದಪರ ಮಂಜೂರಾತಿ ದೊರಕಿದೆಯೇ ?

ಆ) ಈ ನೀರಾವರಿ ಯೋಜನೆಯಿಂದ ಭೀಕರ ಬರಗಾಲಕ್ಕೆ ತುತ್ತಾಗುವ ಗ್ರಾಮಗಳ ರೈತರಿಗೆ ನೀರಾವರಿಗೆ ಅನುಕೂಲವಾಗುವುದು ಸರ್ಕಾರದಪರ ಗಮನಕ್ಕೆ ಬಂದಿದೆಯೇ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಇಲ್ಲ.

ಆ) ಹೌದು.

ಶಿಕಾರಿಪುರ ತಾಲ್ಲೂಕು ಸರಕಾರಿ ಜೂನಿಯರ್ ಕಾಲೇಜ್ ಕೊಠಡಿಗಳ ಕೊರತೆ ಬಗ್ಗೆ

೧೩೫ (೩೧೦) ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಶಿಕಾರಿಪುರ ಸರ್ಕಾರಿ ಕಿರಿಯರ ಕಾಲೇಜಿನಲ್ಲಿ ಕೊಠಡಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದವರು ಏನು ಕ್ರಮ ಕೈಗೊಂಡಿದ್ದಾರೆ ?